

**ಉದ್ಯೋಗ ಕಡಿತ ಯಾವ ಕಂಪನಿಯಲ್ಲಿ ಎಷ್ಟು?**

| | |
|---|---|
| ಟ್ವಿಟರ್: | 3,700 (ಶೇ. 50) |
| ಮೆಟಾ: | 11,000 |
| ಅಮೆಜಾನ್: | 10,000 |
| ನೆಟ್‌ಫ್ಲಿಕ್ಸ್: | 500 |
| ಮೈಕ್ರೊಸಾಫ್ಟ್: | ಶೇ. 1 |
| ಎಲ್ ಆಂಡ್ ಟಿ: | ಶೇ. 5 |
| ಟೆಕ್ ಮಹೀಂದ್ರಾ: | ಶೇ. 1.4 |
| ವಿಪ್ರೊ: | ಶೇ. 6.5 |
| ಲಿಫ್ಟ್: | ಶೇ. 13 |

(ಮಾಹಿತಿ: ಎಕನಾಮಿಕ್ ಟೈಮ್ಸ್)

ಪ್ರಕಟಿಸುವ layoffs.fyi ಎನ್ನುವ ವೆಬ್‌ಸೈಟ್ ಇದೆ. ಅದರ ಪ್ರಕಾರ, 2022ರಲ್ಲಿಯೇ ಜಗತ್ತಿನ 889 ಟೆಕ್ ಕಂಪನಿಗಳು 1,42,540 ಉದ್ಯೋಗಿಗಳನ್ನು ವಜಾ ಮಾಡಿವೆ. ಕೋವಿಡ್‌ನಿಂದ ಈ ತನಕ 1,424 ಟೆಕ್ ಕಂಪನಿಗಳು 2,38,531 ಸಿಬ್ಬಂದಿಯನ್ನು ಮನೆಗೆ ಕಳಿಸಿವೆ. ಉದ್ಯೋಗಿಗಳನ್ನು ಮನೆಗೆ ಕಳಿಸಿರುವ ಸಂಸ್ಥೆಗಳ ಪಟ್ಟಿಯಲ್ಲಿ ಆ್ಯಪಲ್, ಗೂಗಲ್, ಫೇಸ್‌ಬುಕ್ ಒಡೆತನದ ಮೆಟಾ, ನೆಟ್‌ಫ್ಲಿಕ್ಸ್, ಮೈಕ್ರೊಸಾಫ್ಟ್ ಸೇರಿದಂತೆ ಜಾಗತಿಕ ದೈತ್ಯ ಕಂಪನಿಗಳೂ ಇವೆ. ಈ ಕಂಪನಿಗಳು ತಮ್ಮ ಉದ್ಯೋಗಿಗಳಿಗೆ ಪಿಂಕ್ ಸ್ಲಿಪ್ ನೀಡಿ, ಕಂಪನಿಗೆ ಎಷ್ಟು ಉಳಿತಾಯವಾಗಿದೆ ಎಂದು ಲೆಕ್ಕಾಚಾರ ಹಾಕುತ್ತಾ ಕೂತಿವೆ. ವರ್ಷಾಂತ್ಯದ ರಜೆಗಳನ್ನು ಖಾಲಿಮಾಡಲು ಹೊರಗೆ ಔಟಿಂಗ್ ಹೋಗೋಣ ಎಂದು ಯೋಚಿಸುತ್ತಿದ್ದ ಉದ್ಯೋಗಿಗಳ ಪಾಲಿಗೆ ಪರ್ಮನೆಂಟ್ ರಜೆಯನ್ನೇ ಕಂಪನಿಗಳು ನೀಡಿವೆ. ಆ್ಯಪಲ್‌ನಂತಹ ಕಂಪನಿಗಳು ಸಿಬ್ಬಂದಿಯ ನೇಮಕಾತಿಯನ್ನು ಕಡಿಮೆ ಮಾಡುತ್ತಿವೆ.

ಅಮೆಜಾನ್ ಸುಮಾರು 10,000, ಫೇಸ್‌ಬುಕ್ ಒಡೆತನದ ಮೆಟಾ 11,000, ಟ್ವಿಟರ್ 3,700 ಉದ್ಯೋಗಿಗಳನ್ನು ಮನೆಗೆ ಕಳಿಸಿದೆ. ಜಾಗತಿಕ ಕಂಪನಿಗಳ ಕಥೆ ಬಿಡಿ, ಭಾರತದಲ್ಲೂ ಪರಿಸ್ಥಿತಿ ಕೆಟ್ಟದಾಗಿಯೇ ಇದೆ. ಫ್ರೆಶರ್ಸ್‌ಗೆ ಆಫರ್ ಲೆಟರ್ ಕೊಟ್ಟಿದ್ದ ಕಂಪನಿಗಳು ತಮ್ಮ ಆಹ್ವಾನವನ್ನು ಮುಂದೂಡಿವೆ. ಕೆಲವರಿಂದ ಆಫರ್ ಲೆಟರ್‌ಗಳನ್ನೇ ವಾಪಸ್ ಪಡೆದಿವೆ.

ಕೋವಿಡ್ ಕಾಲದಲ್ಲಿ ಲಾಭದ ಉತ್ತುಂಗದಲ್ಲಿದ್ದ ಎಜುಟೆಕ್ ಕಂಪನಿಗಳ ಪರಿಸ್ಥಿತಿ ಬಿಗಡಾಯಿಸಿದೆ. ದೊಡ್ಡ ಕಂಪನಿಗಳೇ ಕಂಪಿಸುತ್ತಿವೆ ಎನ್ನುವುದಾದರೆ, ಸ್ಟಾರ್ಟಪ್‌ಗಳ ಸ್ಥಿತಿ ಇನ್ನೂ ಭೀಕರ. ಫಂಡಿಂಗ್ ಕೊರತೆಯಿಂದ ಬಹುತೇಕ ಸ್ಟಾರ್ಟಪ್‌ಗಳು ಅಪೌಷ್ಟಿಕತೆಯಿಂದ ಬಳಲುತ್ತಿವೆ.

## ಬಾಸ್‌ಗಳಿಗೂ ಕಂಟಕ!

ಕೆಲಸದಿಂದ ವಜಾಗೊಳ್ಳುವ ಪರಿಸ್ಥಿತಿಗಳು ಸಾಮಾನ್ಯ ನೌಕರರಿಗಷ್ಟೇ ಅಲ್ಲ, ಬಾಸ್‌ಗಳಿಗೂ ಉಂಟು. ಕೋವಿಡ್ ಬಿಕ್ಕಟ್ಟಿನ ಅವಧಿಯಲ್ಲಿ ಉದ್ಯೋಗ ಕಡಿತದ ಪ್ರಕರಣಗಳು ಸಾಮಾನ್ಯವಾಗಿದ್ದವು. ಆ ಅವಧಿಯಲ್ಲಿ ಜೀವ–ಜೀವನ ಉಳಿಸಿಕೊಳ್ಳುವುದೇ ದೊಡ್ಡ ಸವಾಲಿನ ಕೆಲಸವಾಗಿತ್ತು. ಇಂದು ಗೆಳೆಯನ ಕೆಲಸ ಹೋಯಿತು, ನಾಳೆ ನನ್ನದು ಹೋಗಬಹುದು ಎನ್ನುವ ಕಳವಳದಲ್ಲೇ ಅನೇಕರ ವರ್ಷಗಳು ಕಳೆದಿದ್ದವು. ಕೋವಿಡ್ ಸಂಕಷ್ಟ ಮುಗಿಯಿತು, ಎಲ್ಲವೂ ನ್ಯೂನಾರ್ಮಲ್ ಆಯಿತು ಎನ್ನುವಾಗಲೇ ಕೋವಿಡ್‌ಗೂ ಭೀಕರವಾದ ಲೇ–ಆಫ್ ವೈರಸ್ ಎಲ್ಲ ಕಂಪನಿಗಳಿಗೂ ಹರಡುತ್ತಿದೆ.

ಉದ್ಯೋಗಿಗಳನ್ನು ನಿಷ್ಕರುಣೆಯಿಂದ ವಜಾಗೊಳಿಸುವ ಹೊಸ ಹೊಸ ಪದ್ಧತಿಗಳು ಕಾರ್ಪೊರೇಟ್ ಜಗತ್ತಿನಲ್ಲಿ ಚಾಲ್ತಿಯಲ್ಲಿವೆ. ಸಾಮಾನ್ಯ ಕೆಲಸಗಾರರಿಗೆ ಮಾತ್ರವಲ್ಲ, ಸಿಇಒದಂಥ ದೊಡ್ಡ ಹುದ್ದೆಗಳಲ್ಲಿದ್ದವರಿಗೂ ಶಾಕ್ ನೀಡುವಲ್ಲಿ ಕಂಪನಿಗಳು ದೊಡ್ಡ 'ಆರ್ ಆಂಡ್ ಡಿ'ಯನ್ನೇ ಮಾಡುತ್ತಿವೆ. ಟ್ವಿಟರ್ ಸಿಇಒ ಸೇರಿದಂತೆ ಉನ್ನತಾಧಿಕಾರಿಗಳು ಏಕಾಏಕಿ ವಜಾ ಆದ ತಾಜಾ ಉದಾಹರಣೆಯೇ ಇದೆ. ಹಿಂದೆ, ಸೈರಸ್ ಮಿಸ್ತ್ರಿ ಅವರಿಗೆ 'ಟಾಟಾ ಗ್ರೂಪ್' ನಿರ್ಗಮನದ ದ್ವಾರ ಎಲ್ಲಿದೆ ಎನ್ನುವುದನ್ನು ತೋರಿಸಿತ್ತು.

## ಕಂಪನಿಗಳಿಗೆ ಬಂತೇ ಬಡತನ?

- ಅಮೆರಿಕ, ಬ್ರಿಟನ್, ಭಾರತ ಸೇರಿದಂತೆ ಬಹುತೇಕ ರಾಷ್ಟ್ರಗಳು ಹಣದುಬ್ಬರದ ಹೊಡೆತದಿಂದ ತತ್ತರಿಸಿವೆ. ಹಣದುಬ್ಬರ ನಿಯಂತ್ರಿಸಲು ವಿವಿಧ ದೇಶಗಳ ಕೇಂದ್ರೀಯ ಬ್ಯಾಂಕ್‌ಗಳು ಬಡ್ಡಿ ದರ ಕಡಿತಕ್ಕೆ ಮುಂದಾಗಿವೆ. ಇದರಿಂದ ಆರ್ಥಿಕತೆ ಮಂದಗತಿಗೆ ತಿರುಗಿದೆ.
- ಜಾಗತಿಕ ಆರ್ಥಿಕ ಹಿಂಜರಿತದ ಭೀತಿ ಎಲ್ಲ ಕಂಪನಿಗಳನ್ನೂ ಕಾಡುತ್ತಿದೆ. ರಿಸೆಷನ್ ನಿಭಾಯಿಸಲು ಪೂರ್ವಭಾವಿಯಾಗಿ ವೆಚ್ಚ ಕಡಿತಕ್ಕೆ ಮುಂದಾಗಿವೆ. ಈ ಹಾದಿಯಲ್ಲಿ ಮೊದಲಿಗೆ ಕಾಣಿಸಿರುವುದು ಲೇ–ಆಫ್.
- ಕೋವಿಡ್ ಸಂದರ್ಭದಲ್ಲಿನ ಲಾಕ್‌ಡೌನ್ ವೇಳೆ ಜನರು ಮನೆ ಸೇರಿದ್ದರು. ಆಗ ಸಾಮಾಜಿಕ ಜಾಲತಾಣಗಳು, ಒಟಿಟಿಗಳು, ಆನ್‌ಲೈನ್ ಶಾಪಿಂಗ್ ತಾಣಗಳು ಜನಪ್ರಿಯವಾಗಿದ್ದವು. ಶಾಲೆಗಳು ನಡೆಯದ ಕಾರಣ ಎಜುಟೆಕ್ ಸ್ಟಾರ್ಟಪ್‌ಗಳು ತ್ವರಿತ ವೇಗದಲ್ಲಿ ಬೆಳೆದಿದ್ದವು. ಉದ್ಯೋಗಿಗಳನ್ನೂ ಸ್ವಲ್ಪ ಜಾಸ್ತಿಯೇ ನೇಮಕ ಮಾಡಿಕೊಂಡಿದ್ದವು. ಈಗ ಪರಿಸ್ಥಿತಿ ಕೋವಿಡ್ ಮೊದಲಿನ ಸ್ಥಿತಿಗೆ ಮರಳಿದ್ದು, ಆನ್‌ಲೈನ್ ಆಧಾರಿತ ಸೇವೆಗಳು ಮತ್ತು ಟೆಕ್ ಕಂಪನಿಗಳಿಗೆ ಹೊರೆ ಬಿದ್ದಿದೆ.
- ಈ ಮೊದಲು ಬಿಲಿಯನ್ ಡಾಲರ್ ಲಾಭ ದಾಖಲಿಸಿದ್ದ ಕಂಪನಿಗಳಿಗೆ ಅಲ್ಪ ಕಾಲದ ನಷ್ಟ ಭರಿಸಲು ಮನಸ್ಸಿಲ್ಲ. ಲಾಭದಲ್ಲಿ ರಾಜಿಗೆ ಸಿದ್ಧರಿಲ್ಲ. ಹೀಗಾಗಿಯೇ ಉದ್ಯೋಗ ಕಡಿತಕ್ಕೆ ಕತ್ತರಿಯನ್ನು ಹರಿತ ಮಾಡಿಕೊಂಡಿವೆ.
- ಸಿಬ್ಬಂದಿಯ ಗಾತ್ರ ಕಡಿತ, ಜಾಹೀರಾತು ಮತ್ತು ಮಾರ್ಕೆಟಿಂಗ್ ವೆಚ್ಚ ಕಡಿತ ಅನ್ನುವುದು ಕಂಪನಿಗಳ ವೆಚ್ಚ ಕಡಿತದ ಪ್ರಮುಖ ಭಾಗ.

## ಕೆಲಸ ಹೋದರೆ ಏನಾಯಿತು?

ಮನೋಹರ್ ಮತ್ತು ದೀಪಾ ದಂಪತಿಯನ್ನು ಕಂಡವರು ಬೆರಗಾಗುತ್ತಿದ್ದರು. ಇಬ್ಬರೂ ಟೆಕ್ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದರು. ಲಕ್ಷ ಲಕ್ಷ ಸಂಬಳ ಕೈಸೇರುತ್ತಿತ್ತು. ಬ್ಯಾಂಕ್‌ಗಳು ಸಾಲ ನೀಡಲು ಪೈಪೋಟಿಗೆ ಬಿದ್ದವು. ದೊಡ್ಡ ಸಂಬಳದ ಖಾತ್ರಿಯಿಂದ ದೊಡ್ಡ ಅಪಾರ್ಟ್‌ಮೆಂಟ್, ದೊಡ್ಡ ಕಾರು ಎಲ್ಲವನ್ನೂ ಈ ದಂಪತಿ ತಮ್ಮದಾಗಿಸಿಕೊಂಡರು. ಇವರಿಗೆ 'ಇಎಂಐ' ಅನ್ನುವುದು ಹೊರೆ ಎಂದು ಅನ್ನಿಸಲೇ ಇಲ್ಲ. ಫಾರಿನ್ ಟ್ರಿಪ್, ಐಷಾರಾಮಿ ಜೀವನಶೈಲಿ ಎಲ್ಲವೂ ಸಹಜ ಎನ್ನಿಸುವ ಮಟ್ಟಿಗೆ ಬದುಕಿನಲ್ಲಿ ಬೆರೆತವು. ಎಲ್ಲವೂ ಸರಿಯಾಗಿತ್ತು. ಆದರೆ, ಏಕಾಏಕಿ ಇಬ್ಬರೂ ಕೆಲಸ ಕಳೆದುಕೊಂಡರು. ಇಎಂಐಗಳೀಗ ಕುತ್ತಿಗೆ ಹಿಸುಕುತ್ತಿವೆ. ಅಪಾರ್ಟ್‌ಮೆಂಟ್ ಅಥವಾ ಕಾರನ್ನು ಮಾರೋಣ